**ಕರ್ನಾಟಕ ಸರ್ಕಾರ**
**ಸಮಗ್ರ ಮಕ್ಕಳ ರಕ್ಷಣಾ ಯೋಜನೆ**

ಸಂ.ಕೆಎಸ್‌ಐಸಿಪಿಎಸ್/ಕೋವಿಡ್-19/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:13.04.2020

## ಆದೇಶ

ವಿಷಯ: ಕೋವಿಡ್-19ರ ಹಿನ್ನೆಲೆಯಲ್ಲಿ ವಲಸೆ ಕುಟುಂಬಗಳ ಮಕ್ಕಳ ಪೋಷಣೆ ಮತ್ತು ರಕ್ಷಣೆಗೆ ಸಂಬಂಧಪಟ್ಟಂತೆ ಕೈಗೊಳ್ಳಬೇಕಾದ ಅನುಪಾಲನೆ ಬಗ್ಗೆ.

ಉಲ್ಲೇಖ: ಚೈಲ್ಡ್‌ಲೈನ್ ಇಂಡಿಯಾ ರವರು ಕಳುಹಿಸುತ್ತಿರುವ ಜಿಲ್ಲಾವಾರು ವಲಸೆ/ವಸತಿ ರಹಿತ ಕುಟುಂಬಗಳ ವಿವರ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಚೈಲ್ಡ್‌ಲೈನ್ ಇಂಡಿಯಾ ಫೌಂಡೇಷನ್ ರವರು ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯದ ಆಯಾ ಜಿಲ್ಲೆಗಳಲ್ಲಿ ಸಿದ್ಧ ಆಹಾರ/ಆಹಾರ ದಾಸ್ತಾನು ಅವಶ್ಯಕತೆ ಇರುವಂತಹ ವಲಸೆ ಕುಟುಂಬಗಳ ಮಾಹಿತಿಯನ್ನು ನೀಡುತ್ತಿದ್ದು, ಈ ಬಗ್ಗೆ ಸಮಗ್ರ ಮಕ್ಕಳ ರಕ್ಷಣಾ ಯೋಜನೆ ವತಿಯಿಂದ ಅವಶ್ಯಕ ಅನುಪಾಲನೆಯನ್ನು ಮಾಡಬೇಕಾಗಿರುತ್ತದೆ. ಮುಖ್ಯವಾಗಿ ಆ ಕುಟುಂಬಗಳ ಮಕ್ಕಳಿಗೆ ಪೋಷಣೆ ಮತ್ತು ರಕ್ಷಣೆಯ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿರುತ್ತದೆ.

ಅದರಂತೆ ಕೇಂದ್ರ ಕಛೇರಿಯಿಂದ ವಾಟ್ಸ್‌ಪ್ ಮುಖಾಂತರ ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಚೈಲ್ಡ್‌ಲೈನ್ ಇಂಡಿಯಾ ರವರು ನೀಡುತ್ತಿರುವ ಮಾಹಿತಿಯನ್ನು ತಲುಪಿಸಿ ಈ ಬಗ್ಗೆ ಸದರಿ ಸ್ಥಳಕ್ಕೆ ಭೇಟಿ ನೀಡಿ ವಲಸೆ ಬಂದಿರುವ ಕುಟುಂಬಗಳೊಂದಿಗೆ ಮಾತನಾಡಿ ಸದರಿ ಕುಟುಂಬದಲ್ಲಿರುವ ಮಕ್ಕಳಿಗೆ ಬೇಕಾಗಿರುವ ಪೋಷಣೆ ಮತ್ತು ರಕ್ಷಣೆ ಬಗ್ಗೆ ವೈಯಕ್ತಿಕವಾಗಿ ಗಮನಿಸಿ ಅವಶ್ಯಕ ಆಹಾರ ಪದಾರ್ಥಗಳನ್ನು (ಡ್ರೈ ರೇಷನ್, ಗ್ರಾಸರಿ ಇತ್ಯಾದಿ)ಗಳನ್ನು ನೀಡಲು ಅವಶ್ಯಕ ಸೂಚನೆಗಳನ್ನು ನೀಡಲಾಗುತ್ತಿದೆ.

ಕೇಂದ್ರ ಕಛೇರಿ ನಿರ್ದೇಶನದಂತೆ ಈಗಾಗಲೇ ಹಲವಾರು ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಆಗಾಗ್ಗೆ ಕ್ರಮಗಳನ್ನು ಕೈಗೊಂಡು ವಾಟ್ಸ್‌ಪ್ ಮುಖಾಂತರ ಅನುಪಾಲನಾ ವರದಿಗಳನ್ನು ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಈಗಾಗಲೇ ಸಲ್ಲಿಸಿರುವ ಅನುಪಾಲನಾ ವರದಿಗಳನ್ನು ಕೇಂದ್ರ ಕಛೇರಿಯಲ್ಲಿ ಕ್ರೂಢೀಕರಿಸಬೇಕಾಗಿರುತ್ತದೆ ಅಲ್ಲದೇ ಇನ್ನೂ ಯಾವ ಜಿಲ್ಲೆಗಳಿಂದ ಅನುಪಾಲನಾ ವರದಿ ಸ್ವೀಕೃತವಾಗಿಲ್ಲ ಆಯಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಂದ ನಿರಂತರ ಸಂಪರ್ಕದಲ್ಲಿದ್ದು ಅನುಪಾಲನಾ ವರದಿಯನ್ನು ತರಿಸಿಕೊಳ್ಳುವುದು ಹಾಗೂ ಭವಿಷ್ಯದಲ್ಲಿ ಚೈಲ್ಡ್‌ಲೈನ್ ಇಂಡಿಯಾ ಫೌಂಡೇಷನ್ ರವರು ವಲಸೆ ಕುಟುಂಬ/ವಸತಿ ರಹಿತ ಕುಟುಂಬಗಳ ಮಕ್ಕಳ ಪೋಷಣೆ ಮತ್ತು ರಕ್ಷಣೆ ಬಗ್ಗೆ ಜಿಲ್ಲಾವಾರು ಮಾಹಿತಿ ನೀಡಲಿದ್ದು, ಮಾಹಿತಿ ಸ್ವೀಕೃತವಾದ ಕೂಡಲೇ ಅದರ ಬಗ್ಗೆ ಸಂಬಂಧಿಸಿದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಮಾಹಿತಿಯನ್ನು ಸಲ್ಲಿಸುವುದು ಮತ್ತು ನಿರಂತರ ಸಂಪರ್ಕದಲ್ಲಿದ್ದು, ಅವರಿಂದ ಅನುಪಾಲನಾ ವರದಿಯನ್ನು ತರಿಸಿಕೊಳ್ಳುವುದು. ಈ ಕರ್ತವ್ಯವನ್ನು ನಿರ್ವಹಿಸಲು ಕೇಂದ್ರ ಕಛೇರಿಯ ಯುನಿಸೆಫ್ ಸಿಬ್ಬಂದಿಗಳಾದ ಶ್ರೀಮತಿ ಸುನೀತಾ ಮತ್ತು ಆಯಿಷಾ ರವರಿಗೆಈ ಕರ್ತವ್ಯವನ್ನು ವಹಿಸಲಾಗಿದೆ.

ಗುಲ್ಬರ್ಗಾ, ಬೆಂಗಳೂರು ವಿಭಾಗವನ್ನು ಶ್ರೀಮತಿ ಆಯಿಷಾ(ಮೊಬೈಲ್ ಸಂ.8867450972) ಹಾಗೂ ಮೈಸೂರು ಮತ್ತು ಬೆಳಗಾಂ ವಿಭಾಗವನ್ನು ಶ್ರೀಮತಿ ಸುನೀತಾ(ಮೊಬೈಲ್ ಸಂ.9972861328)ರವರು ನಿರ್ವಹಿಸಲು ಸೂಚಿಸಿದೆ.

REDMI NOTE 8
AI QUAD CAMERA

REDMI NOTE 8
AI QUAD CAMERA

ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮೇಲೆ ನಿರ್ದೇಶಿಸಿದ ಕೇಂದ್ರ ಕಛೇರಿಯ ಸಿಬ್ಬಂದಿಯೊಡನೆ ನಿರಂತರ ಸಂಪರ್ಕದಲ್ಲಿದ್ದು, ತಮ್ಮ ತಮ್ಮ ಜಿಲ್ಲೆಯಲ್ಲಿ ಚೈಲ್ಡ್‌ಲೈನ್ ಇಂಡಿಯಾ ರವರು ನೀಡುವ ಮಾಹಿತಿಯಂತೆ ಎಲ್ಲಾ ಅವಶ್ಯಕ ವಲಸಿಗ/ವಸತಿ ರಹಿತ ಕುಟುಂಬಗಳ ಮೂಲಭೂತ ಬೇಡಿಕೆಯನ್ನು ಪೂರೈಸಿದ ನಂತರ ಮೇಲೆ ತಿಳಿಸಿರುವ ಸಿಬ್ಬಂದಿಗಳಿಗೆ ಸದರಿ ಅನುಪಾಲನಾ ವರದಿಯನ್ನು ನೀಡುವುದು.

ಕೇಂದ್ರ ಕಛೇರಿಯ ಸಿಬ್ಬಂದಿಗಳು ಜಿಲ್ಲಾಮಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚೈಲ್ಡ್‌ಲೈನ್ ಸಿಬ್ಬಂದಿಗಳ ಮೊಬೈಲ್ ಅಥವಾ ದೂರವಾಣಿ ಸಂಖ್ಯೆ ಮಾಹಿತಿಯನ್ನು ತಮ್ಮಲ್ಲಿ ನಿರ್ವಹಿಸುವುದು ಮತ್ತು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತೆಗೆದುಕೊಂಡ ಕ್ರಮದ ಬಗ್ಗೆ ನೀಡಿರುವ ಮಾಹಿತಿಯನ್ನು ಜಿಲ್ಲಾ ಮಟ್ಟದ ಚೈಲ್ಡ್‌ಲೈನ್ ಸಿಬ್ಬಂದಿಯೊಡನೆ ಚರ್ಚಿಸಿ, ಒಂದು ವೇಳೆ ಜಿಲ್ಲಾಮಟ್ಟದಲ್ಲಿ ತೆಗೆದುಕೊಂಡ ಕ್ರಮದಲ್ಲಿ ಬದಲಾವಣೆಗಳಿದ್ದಲ್ಲಿ ಚೈಲ್ಡ್‌ಲೈನ್ ನವರ ಕೋರಿಕೆಯಂತೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳೊಡನೆ ಸಂಪರ್ಕದಲ್ಲಿದ್ದು, ಕೋರಿಕೆಯಂತೆ ಅಗತ್ಯ ಕ್ರಮ ಕೈಗೊಂಡ ಮಾಹಿತಿಯನ್ನು ಒದಗಿಸುವುದು. ಜಿಲ್ಲಾ ಮಟ್ಟದ ಚೈಲ್ಡ್‌ಲೈನ್ ಸಿಬ್ಬಂದಿಯವರು ತಮ್ಮ ಕೋರಿಕೆಯಂತೆ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದಲ್ಲಿ ಅಂತಹ ಪೂರ್ಣಗೊಂಡ ಅಂತಿಮ ಮಾಹಿತಿಯನ್ನು ಶ್ರೀಮತಿ ಭಾರತಿದೇವಿ ಬಿ.ಎಸ್. ಕಾರ್ಯಕ್ರಮ ವ್ಯವಸ್ಥಾಪಕರು(ಸಾರಾ), ಪ್ರಧಾನ ಕಛೇರಿ ಇವರಿಗೆ ಕ್ರೂಢೀಕರಿಸಿ ಸಲ್ಲಿಸುವುದು. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಚೈಲ್ಡ್‌ಲೈನ್ ಸಿಬ್ಬಂದಿಗಳ ನಡುವೆ ನಿಯೋಜಿಸಲ್ಪಟ್ಟ ಕೇಂದ್ರ ಕಛೇರಿಯ ಸಿಬ್ಬಂದಿಗಳು ಸಂಪರ್ಕ ಸೇತುವೆ ರೀತಿಯಲ್ಲಿ ಕರ್ತವ್ಯ ನಿರ್ವಹಿಸಿ ಸಮನ್ವಯ ಸಾಧಿಸುವುದು. ಒಟ್ಟಾರೆಯಾಗಿ ಒಂದೊಂದು ಜಿಲ್ಲೆಯಲ್ಲಿ ಚೈಲ್ಡ್‌ಲೈನ್ ಇಂಡಿಯಾ ಫೌಂಡೇಷನ್‌ರವರು ನೀಡಿದ ಮಾಹಿತಿಯನ್ನಾಧರಿಸಿ ಎಲ್ಲಾ ಕುಟುಂಬಗಳಿಗೆ ಅಗತ್ಯವಿರುವ ಅವಶ್ಯಕತೆಗಳನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪೂರೈಸಿ ವರದಿಯನ್ನು ಕೇಂದ್ರ ಕಛೇರಿಗೆ ಅನುಪಾಲನೆ ಸಲ್ಲಿಸುವ ರೀತಿ ಕೇಂದ್ರ ಕಛೇರಿಯ ಸಿಬ್ಬಂದಿ ಕರ್ತವ್ಯ ನಿರ್ವಹಿಸುವುದು. ಕೇಂದ್ರ ಕಛೇರಿಯ ಸಿಬ್ಬಂದಿಗಳು ಸಂಬಂಧಿಸಿದ ಎಲ್ಲಾ ಜಿಲ್ಲೆಗಳಿಂದ ಅನುಪಾಲನಾ ವರದಿಯನ್ನು ತರಿಸಿಕೊಂಡು ಅದನ್ನು ಕ್ರೂಢೀಕರಿಸಬೇಕು.

ಕ್ರೂಢೀಕರಿಸಿದ ವರದಿಗಳನ್ನು ಶ್ರೀಮತಿ ಭಾರತಿದೇವಿ ಬಿ.ಎಸ್. ಕಾರ್ಯಕ್ರಮ ವ್ಯವಸ್ಥಾಪಕರು(ಸಾರಾ), ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಬೆಂಗಳೂರು ಇವರಿಗೆ ಸಲ್ಲಿಸಬೇಕು. ಶ್ರೀಮತಿ ಭಾರತಿದೇವಿ ಬಿ.ಎಸ್. ರವರು ಕ್ರೂಢೀಕರಿಸಿದ ಮಾಹಿತಿಯನ್ನು ಪರಿಶೀಲಿಸಿ, ಚೈಲ್ಡ್‌ಲೈನ್ ಇಂಡಿಯಾರವರು ಸೂಚಿಸಿದ ಎಲ್ಲಾ ವಿಷಯಗಳನ್ನು ಅನುಪಾಲಿಸಲಾಗಿದೆಯೇ ಎಂಬ ಬಗ್ಗೆ ದೃಢೀಕರಿಸಿಕೊಂಡು ನಂತರ ಅಂತಿಮ ಪಾಲನಾ ವರದಿಯನ್ನು ನಿರ್ದೇಶಕರಿಗೆ ಸಲ್ಲಿಸಬೇಕು.

ಅನುಬಂಧದಲ್ಲಿ ಕೋರಿರುವ ತಮ್ಮ ಜಿಲ್ಲೆಗೆ ಸಂಬಂಧಿಸಿದ ವಲಸಿಗ/ವಸತಿರಹಿತ ಕುಟುಂಬಗಳ ಮಾಹಿತಿಯನ್ನು ಕೇಂದ್ರ ಕಛೇರಿಯ ಸದರಿ ಕಾರ್ಯಕ್ಕೆ ನಿಯೋಜಿಸಲ್ಪಟ್ಟ ಸಿಬ್ಬಂದಿಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಸಕಾಲದಲ್ಲಿ ಒದಗಿಸುವುದು(ಹೆಚ್ಚಿನ ಮಾಹಿತಿಯನ್ನು ಷರಾದಲ್ಲಿ ನಮೂದಿಸಿ)

13.04.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

1) ಶ್ರೀಮತಿ ಭಾರತಿದೇವಿ.ಬಿ.ಎಸ್. ಕಾರ್ಯಕ್ರಮ ವ್ಯವಸ್ಥಾಪಕರು(ಸಾರಾ), ಪ್ರಧಾನ ಕಛೇರಿ, ಬೆಂಗಳೂರು ರವರಿಗೆ ಅಗತ್ಯ ಕ್ರಮಕ್ಕಾಗಿ.
2) ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, 30 ಜಿಲ್ಲೆಗಳು ಸೂಕ್ತ ಕ್ರಮ ಕೈಗೊಳ್ಳಲು.
3) ಶ್ರೀಮತಿ ಸುನೀತಾ, ಯುನಿಸೆಫ್ ಸಿಬ್ಬಂದಿ, ಪ್ರಧಾನ ಕಛೇರಿ ಬೆಂಗಳೂರು(ಮೈಸೂರು ಮತ್ತು ಬೆಳಗಾಂ ವಿಭಾಗ)
4) ಕು: ಆಯಿಷಾ, ಯುನಿಸೆಫ್ ಸಿಬ್ಬಂದಿ, ಪ್ರಧಾನ ಕಛೇರಿ ಬೆಂಗಳೂರು(ಬೆಂಗಳೂರು ಮತ್ತು ಗುಲ್ಬರ್ಗಾ ವಿಭಾಗ)
5) ಶ್ರೀಮತಿ ಚಿತ್ರ, ಚೈಲ್ಡ್‌ಲೈನ್ ಇಂಡಿಯಾ

ಅನುಬಂಧ

| ಕ್ರ. ಸಂ. | ಜಿಲ್ಲೆಯ ಹೆಸರು | ಚೈಲ್ಡ್‌ಲೈನ್ ರವರಿಂದ ಮಾಹಿತಿ ಸ್ವೀಕರಿಸಿದ ದಿನಾಂಕ | ಭೇಟಿ ನೀಡಿದ ದಿನಾಂಕ | ಕುಟುಂಬದ ರೀತಿ ವಲಸಿಗ/ವಸತಿ ರಹಿತ | ಡಿಸಿಪಿಒ/ಡಿಸಿಪಿಯು ಘಟಕಗಳ ಸಿಬ್ಬಂದಿ ವಲಸಿಗ ಕುಟುಂಬಗಳನ್ನು ಭೇಟಿಯಾದ ಸ್ಥಳ | ಒಟ್ಟು ಕುಟುಂಬಗಳ ಸಂಖ್ಯೆ | ಕುಟುಂಬದಲ್ಲಿರುವ ಒಟ್ಟು ಮಕ್ಕಳ ಸಂಖ್ಯೆ | ವಲಸಿಗ/ವಸತಿ ರಹಿತ ಕುಟುಂಬದ ಮೂಲ ಸ್ಥಳ (ತಾಲ್ಲೂಕು/ ಜಿಲ್ಲೆ/ರಾಜ್ಯ) | ಒದಗಿಸಿದ ಸೌಲಭ್ಯದ ವಿವರ | ಸೇವೆಯನ್ನು ಒದಗಿಸಿದವರ ವಿವರ (ಎನ್‌ಜಿಒ/ ಇಲಾಖೆ/ ಜಿಲ್ಲಾಡಳಿತ) | ಷರಾ |
|---|---|---|---|---|---|---|---|---|---|---|---|
| | | | | | | | | | | | |